# www.karunaduexams.com

ಗ್ರಾ ಪಂ ಅ ಅಧಿಕಾರಿ ಮತ್ತು ಕಾರ್ಯದರ್ಶಿ ಗ್ರೇಡ್-1 ಕನ್ನಡ ಕ್ವಿಜ್-1

www.karunaduexams.com

ಗ್ರಾ ಪಂ ಅ ಅಧಿಕಾರಿ ಮತ್ತು ಕಾರ್ಯದರ್ಶಿ ಗ್ರೇಡ್-1 ಕನ್ನಡ ಕ್ವಿಜ್-1

ಓದುಗರೇ, ಸಾಮಾನ್ಯ ಕನ್ನಡ ಪತ್ರಿಕೆ ಪರೀಕ್ಷೆಯಲ್ಲಿ ಯಾವ ರೀತಿಯಲ್ಲಿ ಕೇಳಬಹುದು ಎಂಬುದನ್ನು ಅರ್ಥೈಸಲು ನೀಡಲಾಗುತ್ತಿದೆಯಷ್ಟೇ. ಓದುಗರು ವ್ಯಾಕರಣವನ್ನು ಸರಿಯಾಗಿ ಓದುಕೊಂಡು ಹೆಚ್ಚು ಅಭ್ಯಾಸ ಮಾಡಲು ಕೋರಿದೆ.
ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ ಗ್ರೇಡ್-1 ಪರೀಕ್ಷೆ ಸಾಮಾನ್ಯ ಕನ್ನಡ ಪತ್ರಿಕೆ

1. ಕೆಂಗದಿರ ಎಂದರೆ _____?

   ಅ) ಧೂಮಕೇತು

   ಆ) ನಕ್ಷತ್ರ

   ಇ) ಚಂದ್ರ

   ಈ) **ಸೂರ್ಯ**

   ಸೂರ್ಯ

   ಕೆಂಗದಿರ ಎಂಬುದು ಸೂರ್ಯನಿಗಿರುವ ಸಮನಾರ್ಥಕ ಪದ. ನೇಸರ

2. ಇವುಗಳಲ್ಲಿ ಶುದ್ದರೂಪದ ಪದ ಯಾವುದು?

   ಅ) ನಿಶ್ಕರ್ಶೆ

   ಆ) ನಿಶ್ಕರ್ಷೆ

   ಇ) **ನಿಷ್ಕರ್ಷೆ**

   ಈ) ನಿಷ್ಕರ್ಶೆ

   ನಿಷ್ಕರ್ಷೆ

3. ರೈಲಿನಲ್ಲಿ ಎಂಬ ಪದ ___ ವಿಭಕ್ತಿಯಲ್ಲಿದೆ?

   ಅ) ಚತುರ್ಥಿ

   ಆ) **ಸಪ್ತಮಿ**

   ಇ) ಷಷ್ಠಿ

   ಈ) ತೃತೀಯ

   ಸಪ್ತಮಿ

4. ಕ್ರಿಯಾಪದದ ಮೂಲ ರೂಪಕ್ಕೆ ಹೀಗೆನ್ನುವರು ____?

   ಅ) **ಧಾತು**

   ಆ) ಅವ್ಯಯ

www.karunaduexams.com

ಇ) ಸರ್ವನಾಮ

ಈ) ಆಖ್ಯಾತ

ಧಾತು

ಕ್ರಿಯಾ ಪದದ ಮೂಲ ರೂಪಕ್ಕೆ ಧಾತು/ಕ್ರಿಯಾಪ್ರಕೃತಿ ಎಂದು ಹೆಸರು ”ಅಥವಾ“ಕ್ರಿಯಾರ್ಥವನ್ನು ಕೊಡುವುದಾಗೆಯೂ, ಪ್ರತ್ಯಯವನ್ನು ಹೊಂದದೆಯೂ ಇರುವ ಶಬ್ದಕ್ಕೆ ಕ್ರಿಯಾಪ್ರಕೃತಿ/ಧಾತು ಎಂದು ಎಂದು ಹೆಸರು”ಧಾತುಗಳಿಗೆ ಪ್ರತ್ಯಯಗಳು ಸೇರಿ ಕ್ರಿಯಾಪದಗಳಾಗುತ್ತವೆ.

5. “ಜುಳು ಜುಳು” ಇದೊಂದು _______?

ಅ) ದ್ವಿರುಕ್ತಿ

ಆ) ಜೋಡುನುಡಿ

ಇ) **ಅನುಕರಣವ್ಯಯ**

ಈ) ಪಡೆನುಡಿ

ಅನುಕರಣವ್ಯಯ

6. “ಅನುಭವ” ಇದರ ವಿರುದ್ದಾರ್ಥಕ ಪದ ______?

ಅ) ಅನಾನುಭವ

ಆ) **ಅನನುಭವ**

ಇ) ಅನುಭವಿಲ್ಲ

ಈ) ಹೊಸದು

ಅನನುಭವ

7. “ಪತಿವ್ರತೆ” ಇದರ ತದ್ಭವ ರೂಪ_______?

ಅ) ಪವಿತ್ರ

ಆ) **ಹದಿಬದೆ**

ಇ) ಗುಣವಂತೆ

ಈ) ಪತಿತ್ವ

ಹದಿಬದೆ

8. ಈ ಕೆಳಗಿನವುಗಳಲ್ಲಿ ಕನ್ನಡ ಮೂಲದಲ್ಲದ ಪದವನ್ನು ಗುರುತಿಸಿ?

www.karunaduexams.com

ಅ) ಮಣ್ಣು

ಆ) ಕೆಸರು

ಇ) ಉಗುರು

ಈ) **ಕಾಗದ**

ಕಾಗದ

9. “ಹೊಟ್ಟೆ ಬಟ್ಟೆ ಕಟ್ಟಿ” ಈ ನುಡಿಗಟ್ಟಿನ ಅರ್ಥವೇನು?

ಅ) ಹೊಟ್ಟೆ ಮೇಲೆ ಬಟ್ಟೆ ಕಟ್ಟಿಕೊಂಡು

ಆ) ಕಡಿಮೆ ಬಟ್ಟೆ ಧರಿಸು

ಇ) **ಸಾಕಷ್ಟು ಕಷ್ಟಪಟ್ಟು**

ಈ) ಕಡಿಮೆ ಊಟ ಮಾಡು

ಸಾಕಷ್ಟು ಕಷ್ಟಪಟ್ಟು

10. “ಚೆನ್ನಾಗಿ” ಪದಕ್ಕೆ ವ್ಯಾಕರಣದಲ್ಲಿ ಈ ಹೆಸರಿದೆ_____?

ಅ) ನಾಮಪದ

ಆ) ಅನ್ವಯ

ಇ) ಕ್ರಿಯಾಪದ

ಈ) ತದ್ದಿತಾಂತ

ಅನ್ವಯ

11. ಈ ಕೆಳಗಿನ ಯಾವುದು ನಿಷೇದಾರ್ಥಕ ಪದಕ್ಕೆ ಉದಾಹರಣೆಯಾಗಿದೆ?

ಅ) ಸತೀಶ ಬಂದನು

ಆ) **ಬಸ್ಸು ಬಾರದು**

ಇ) ಬೆಳೆ ಬೆಳಯಲಿ

ಈ) ಮಳೆ ಬರುವುದು

ಬಸ್ಸು ಬಾರದು

12. “ಆಳಾಗಬಲ್ಲವನು ಅರಸಾಗಬಲ್ಲ” ಈ ಗಾದೆ ಮಾತಿನ ಅರ್ಥ ____?

ಅ) ಆಳು ಕೆಲಸಮಾಡುವ ಅರಸ ಮಾಡಿಸುವ



www.karunaduexams.com

ಆ) ಸೇವಕನು ಸರ್ವಾಧಿಕಾರಿಯಾಗಬಲ್ಲ

ಇ) ಆಳುಗಳಿಂದಲೇ ಅರಸರಿಗೆ ಹೆಸರು

**ಈ) ಸೇವಾ ಮನೋಬಾವವು ಸ್ಥಾನವನ್ನು ತರಬಲ್ಲದು**

ಸೇವಾ ಮನೋಬಾವವು ಸ್ಥಾನವನ್ನು ತರಬಲ್ಲದು

13. ಈ ಕೆಳಗಿನ ಯಾವುದು ವರ್ತಮಾನ ಕಾಲ ಸೂಚಿಸುತ್ತದೆ?

ಅ) ರಾಜನು ಬಂದನು

ಆ) ರಾಜನು ಬರುವನು

**ಇ) ರಾಜನು ಬರುತ್ತಾನೆ**

ಈ) ರಾಜನು ಬರಲಿಲ್ಲ

ರಾಜನು ಬರುತ್ತಾನೆ

14. "ಅಧಿಕೃತ ಜ್ಞಾಪನ" ಎಂಬುದನ್ನು ಈ ಬಗೆಯ ಪತ್ರದಲ್ಲಿ ಕಾಣಬಹುದು ____?

ಅ) ಮೇಲಾಧಿಕಾರಿಗಳಿಗೆ ಬರೆದ ಪತ್ರ

**ಆ) ಮೇಲಾಧಿಕಾರಿಗಳಿಂದ ಬಂದ ಪತ್ರದಲ್ಲಿ**

ಇ) ಖಾಸಗಿ ಪತ್ರದಲ್ಲಿ

ಈ) ರಜಾ ಅರ್ಜಿಯಲ್ಲಿ

ಮೇಲಾಧಿಕಾರಿಗಳಿಂದ ಬಂದ ಪತ್ರದಲ್ಲಿ

15. "ಕಾನ್ಫರೆನ್ಸ್ (Conference)"ಗೆ ಸಂವಾದಿಯಾಗಿ ಕನ್ನಡದಲ್ಲಿ ಬಳಕೆಯಾಗುವ ಆಡಳಿತ ಪದವಿದು____?

ಅ) ಸಮ್ಮೇಳನ

ಆ) ಸಮಾವೇಶ

ಇ) ಸಭೆ

ಈ) ಕಾರ್ಯಾಗಾರ

**ಸಮ್ಮೇಳನ**

16. "ಹೂದೋಟ" ಇದು ಯಾವ ಸಂಧಿಗೆ ಉದಾಹರಣೆ ಯಾಗಿದೆ?

ಅ) **ಆದೇಶ ಸಂಧಿ**

ಆ) ಆಗಮ ಸಂಧಿ

www.karunaduexams.com

ಇ) ಲೋಪ ಸಂಧಿ

ಈ) ಸವರ್ಣದೀರ್ಘ ಸಂಧಿ

ಆದೇಶ ಸಂಧಿ

17. ಈ ಕೆಳಗಿನ ಯಾವುದು ದ್ವಿರುಕ್ತಿ ಪದ____?

ಅ) **ಬೇಗ ಬೇಗ**

ಆ) ಆಸ್ತಿ ಪಾಸ್ತಿ

ಇ) ಗಿಡಗಂಟಿ

ಈ) ಥಳಥಳ

ಬೇಗ ಬೇಗ

18. ಇದೊಂದು ವಿಶೇಷಣ ಪದ _____?

ಅ) **ಹಿರಿದು**

ಆ) ಇತ್ಯಾದಿ

ಇ) ಹಾಗೂ

ಈ) ಚೆನ್ನಾಗಿ

ಹಿರಿದು

19. ಈ ಕೆಳಗಿನ ಯಾವುದು ಸವರ್ಣಸ್ವರಗಳ ಜೋಡಿಯಲ್ಲ?

ಅ) ಅಆ

ಆ) ಉಊ

ಇ) ಎಏ

ಈ) **ಐಔ**

ಐಔ

20. ಇವುಗಳಲ್ಲಿ ಪ್ರಕಾರ ವಾಚಕ ಶಬ್ದಗಳನ್ನು ಗುರುತಿಸಿ

ಅ) ಎಷ್ಟು-ಇಷ್ಟು

ಆ) **ಅಂತಹ-ಇಂತಹ**

ಇ) ಒಂದನೇ-ಎರಡನೇ

www.karunaduexams.com

ಈ) ನಾಲ್ಕಾರು-ಎಂಟತ್ತು

ಅಂತಹ-ಇಂತಹ

21. "ದಂಡು" ಪದವು ಕನ್ನಡದಲ್ಲಿ ಈ ಲಿಂಗಕ್ಕೆ ಸೇರುವುದಾಗಿದೆ ___?

ಅ) ಸ್ತ್ರೀಲಿಂಗ

ಆ) ಪುಲ್ಲಿಂಗ

ಇ) **ನಪುಂಸಕ ಲಿಂಗ**

ಈ) ಉಭಯ ಲಿಂಗ

ನಪುಂಸಕ ಲಿಂಗ

22. ಈ ಕೆಳಗಿನವುಗಳಲ್ಲಿ ಯಾವುದು ಲೋಪಸಂಧಿಗೆ ಉದಾಹರಣೆಯಾಗಿದೆ?

ಅ) ಲಕ್ಷ್ಮೀಶ

ಆ) **ಊರೂರು**

ಇ) ದೇವಾಲಯ

ಈ) ಸತ್ಯಾನೇಶ್ವಣೆ

ಊರೂರು

ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು 23 ರಿಂದ 25 ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ನೀಡಿ.

ಯುದ್ಧ ಇತಿಹಾಸದುದ್ದಕ್ಕೂ ತನ್ನ ಇರುವಿಕೆಯನ್ನು ತೋರಿಸುತ್ತಾ ಬಂದಿದೆ. ಯಾವುದೇ ಸಾಮ್ರಾಜ್ಯದ ಏಳು-ಬೀಳುಗಳಲ್ಲಿ ಅದು ಪ್ರಮುಖ ಪಾತ್ರವಹಿಸಿದೆ. ಯುದ್ಧ ನಡೆಯಲು ಕಾರಣಗಳು ಹಲವು. ಸಾಮ್ರಾಜ್ಯ ವಿಸ್ತರಣೆ, ಲೋಭ, ವೀರತೆಯ ಪ್ರದರ್ಶನ ಒಂದು ಕಡೆಯಾದರೆ, ಕುಟುಂಬ ಕಲಹಗಳು ಯುದ್ಧಕ್ಕೆ ನಾಂದಿ ಹಾಡಿದ ಘಟನೆಗಳು ದಾಖಲಾಗಿವೆ. ಸುಮಾರು ಐದು ಆರು ಸಾವಿರ ವರ್ಷಗಳ ಹಿಂದೆ ನಡೆದ ಕುರುಕ್ಷೇತ್ರ ಇದಕ್ಕೆ ಸ್ಪಷ್ಟ ನಿದರ್ಶನ. ಕುರುವಂಶದ ರಾಜಕುಮಾರನ ಅಂತಃಕಲಹ 50 ಲಕ್ಷ ಜನರ ಪ್ರಾಣಹಾನಿಯೊಂದಿದೆ ಪರ್ಯಾವಸವಾಯಿತು. ಕೇವಲ ಹದಿನೆಂಟು ದಿನ ನಡೆದ ಈ ಯುದ್ಧ ಕಂಡ ಪರಿಣಾಮ ಅತ್ಯಂತ ಘೋರ.

ಭಾರತ ತನ್ನ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು. ತನ್ನ ಹಠದ ಪಟ್ಟನ್ನು ಸಡಿಲಿಸದೆ, ಮನೋನಿಶ್ಚಯದಂತೆ ಅಪೂರ್ವ ಕುಶಲತೆಯನ್ನು ತೋರಿದ ಪ್ರತಿಭಾವಂತನೀತ. ಸರಳ ತಂತ್ರೋಪಾಯಗಳಿಂದ ಚಂದ್ರಗುಪ್ತಮ ಶತ್ರು ಬಲವನ್ನು ನಿರಾವಲಂಬನಗೊಳಿಸಿ ಮೌರ್ಯ ಸಾಮ್ರಾಜ್ಯ ಸ್ಥಾಪನೆಗೆ ಮಾರ್ಗದರ್ಶಕನಾಗುತ್ತಾನೆ. ಕೌಟಿಲ್ಯನು ತನ್ನನ್ನು ಹಿಂಬಾಲಿಸಿ ಬಂದ ರಾಜ್ಯಲಕ್ಷೀ ಅಧಿಕಾರಗಳನ್ನು ದೂರೀಕರಿಸಿ ವಿರಕ್ತನಂತೆ ಆಶ್ರಮವಾಸಿಯಾಗುತ್ತಾನೆ.

23. ಕುರುಕ್ಷೇತ್ರ ಯುದ್ಧ ಇದಕ್ಕೊಂದು ನಿದರ್ಶನ

ಅ) ಸೈನ್ಯಕ್ಕೆ ಕಳುಹಿಸಿಕೊಡುವುದು

**ಆ) ಕುಟುಂಬ ಕಲಹಗಳು ಯುದ್ಧಕ್ಕೆ ನಾಂದಿ**

ಇ) ವೀರತೆಯ ಪ್ರದರ್ಶನ

ಈ) ವೈರಿಗಳ ಸಂಹಾರ

ಕುಟುಂಬ ಕಲಹಗಳು ಯುದ್ಧಕ್ಕೆ ನಾಂದಿ

24. ವರ್ಣರಂಜಿತ ವ್ಯಕ್ತಿತ್ವ ಎಂದರೆ _____?

ಅ) ಬಣ್ಣ ಬದಲುಸುತ್ತಿದ್ದ ವ್ಯಕ್ತಿ ಎಂದರ್ಥ

**ಆ) ಬಹುಮುಖಿ ಪ್ರತಿಭೆ ಎಂದರ್ಥ**

ಇ) ಕಲಾ ನೈಪುಣ್ಯತೆ ವ್ಯಕ್ತಿ ಎಂದರ್ಥ

ಈ) ಯುದ್ಧ ನೈಪುಣ್ಯತೆ ವ್ಯಕ್ತಿ ಎಂದರ್ಥ

ಬಹುಮುಖಿ ಪ್ರತಿಭೆ ಎಂದರ್ಥ

25. ಕೌಟಿಲ್ಯನು ತನ್ನನ್ನು ಹಿಂಬಾಲಿಸಿ ಬಂದ ಇದನ್ನು ತ್ಯಜಿಸಿದನು _____?

ಅ) ರಾಜ್ಯಲಕ್ಷ್ಮೀ ಎಂಬ ರಾಣಿಯರನ್ನು

ಆ) ಧನ-ಕನಕ ಇತ್ಯಾದಿ ಸಂಪತ್ತನ್ನು

**ಇ) ಸಾಮ್ರಾಜ್ಯ ಸಂಪತ್ತನ್ನು**

ಈ) ರಾಜನ ಸರ್ವಾಧಿಕಾರಗಳನ್ನು

ಸಾಮ್ರಾಜ್ಯ ಸಂಪತ್ತನ್ನು

www.karunaduexams.com